ಮಂಗಳವಾರ, 5 ಸೆಪ್ಟೆಂಬರ್ 2017

ಇಂದಿನ ತಾಪಮಾನ 21° ಕನಿಷ್ಠ 28° ಗರಿಷ್ಠ

# ...ಬೆಂಗಳೂರು

www.vijaykarnataka.com | twitter/vijaykarnataka | facebook.com/vijaykarnataka



ಬರ್ಮುಡಾ ಟ್ರಯ...
ಜನರಿಗೆ ಕಿರಿಕಿರಿ

### ಅವೈಜ್ಞಾನಿಕ ರಾಜಕಾಲುವೆ ಕಾಮಗಾರಿ ನಡೆಸುತ್ತಿರುವ ಬಿಬಿಎಂಪಿ

# ಐಐಎಸ್ಸಿ ಸಲಹೆಗಳಿಗೆ ಕಿಮ್ಮತ್ತಿಲ್ಲ

■ **ಮಂಜುನಾಥ್ ನಾಗಲೀಕರ್** ಬೆಂಗಳೂರು

ರಾಜಕಾಲುವೆಗಳ ತಳಕ್ಕೆ ಕಾಂಕ್ರೀಟ್ ಹಾಕದೆ ನೈಸರ್ಗಿಕ ಸಮತೋಲನ ಕಾಪಾಡಿಕೊಳ್ಳುವಂತೆ ಐಐಎಸ್‌ಸಿ ತಜ್ಞರು ನೀಡಿದ ವರದಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಬಿಬಿಎಂಪಿ, ಹಳೆ ಪದ್ಧತಿಯಲ್ಲೇ ಕಾಮಗಾರಿ ಮುಂದುವರಿಸುತ್ತಿದೆ. ಹೀಗಾಗಿ ನಗರದಲ್ಲಿ ಜಲ ಸಮತೋಲನ ಏರುಪೇರಾಗಿದ್ದು, ದಿಢೀರ್ ಪ್ರವಾಹ ಉಂಟಾಗುತ್ತಿದೆ.

2016ರ ಆಗಸ್ಟ್‌ನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿದ್ದ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್, ಕೆರೆಗಳ ಅಭಿವೃದ್ಧಿ ಹಾಗೂ ಮಳೆ ನೀರು ಕಾಲುವೆಗಳ ನೀರಿನ ಸದ್ಬಳಕೆ, ಪ್ರವಾಹ ನಿಯಂತ್ರಣದ ಕುರಿತು ಸಲಹೆ ಕೇಳಿದ್ದರು. ''ಮಳೆ ನೀರು ಕಾಲುವೆಗಳ ತಳಕ್ಕೆ ಕಾಂಕ್ರೀಟ್ ಹಾಕುವುದು ಅವೈಜ್ಞಾನಿಕ ಕ್ರಮ. ಅದು ಹಣ ಲೂಟಿ ಮಾಡುವ ಯೋಜನೆಯಾಗಿದೆ. ಹೀಗಾಗಿ ಹಳೆ ಒಪ್ಪಂದವನ್ನು ರದ್ದು ಮಾಡುವಂತೆ,'' ಅಲ್ಲಿನ ವಿಜ್ಞಾನಿಗಳು ಸೂಚಿಸಿದ್ದರು.

**800 ಕೋಟಿ ರೂ. ವೆಚ್ಚದ ರಾಜಕಾಲುವೆ ಕಾಮಗಾರಿ**

**300 ಕೋಟಿ ರೂ. ಅನುದಾನಕ್ಕೆ ಸಂಪುಟ ಒಪ್ಪಿಗೆ**

ಅದಕ್ಕೆ ಒಪ್ಪಿದ ಆಯುಕ್ತರು, ಬಿಬಿಎಂಪಿಗೆ ಪತ್ರ ಬರೆಯುವಂತೆ ಸೂಚಿಸಿದ್ದರು. ಆ ಪ್ರಕಾರ, ವಿಜ್ಞಾನಿ ಟಿ.ವಿ ರಾಮಚಂದ್ರ ಅವರು ಬಿಬಿಎಂಪಿಗೆ ವಿವರ ಪತ್ರ ಬರೆದಿದ್ದರು. ಆದರೆ, ಆ ಸೂಚನೆಗಳನ್ನು ಅಳವಡಿಕೊಳ್ಳಲು ಬಿಬಿಎಂಪಿ ಇನ್ನೂ ಮುಂದಾಗಿಲ್ಲ. ಹೀಗಾಗಿ ಹಳೆ ಪದ್ಧತಿಯಲ್ಲೇ ಕಾಮಗಾರಿ ನಡೆಸಲಾಗುತ್ತಿದೆ. ಇದರಿಂದಾಗಿ ಮಳೆ ನೀರು ಭೂಮಿಯಲ್ಲಿ ಇಂಗದೇ ಜೋರಾಗಿ ಹರಿದು ವಸತಿ ಬಡಾವಣೆಗಳಿಗೆ ನುಗ್ಗಿ ಜನಜೀವನ ಅಸ್ತವ್ಯಸ್ತ ಮಾಡುತ್ತಿದೆ.

»IV

**ಮಳೆ ನೀರು ಕಾಲುವೆ ನೈಸರ್ಗಿಕವಾಗಿ ಇಡುವಂತೆ ಹೇಳಿದ್ದ ಸೂಚನೆಗೆ ಬೆಲೆಯಿಲ್ಲ**

**ಜಲಸಮತೋಲನಕ್ಕೆ ಧಕ್ಕೆ ತರದಂತೆ ನೀಡಿದ ವಿಜ್ಞಾನಿಗಳು**



ಸಂಗ್ರಹ ಚಿತ್ರ

### ಬೋರ್‌ವೆಲ್ ಬರಿದು

''ಕಾಂಕ್ರೀಟ್ ಕಾಲುವೆ ತಾತ್ಕಾಲಿಕವಾಗಿ ಮಳೆ ನೀರು ಹರಿದು ಹೋಗುವಂತೆ ಮಾಡುತ್ತದೆ. ಕೋಟಿ ಜನಸಂಖ್ಯೆ ಇರುವ ಬೆಂಗಳೂರಿನ ಸಾವಿರಾರು ಕಟ್ಟಡಗಳಲ್ಲಿ ಬೋರ್‌ವೆಲ್ ನೀರಿನ ಮೇಲೆ ಅವಲಂಬಿತರಾದವರೂ ಸಾಕಷ್ಟು ಜನ ಇದ್ದಾರೆ. ನೀರು ಇಂಗದ ಕಾರಣ ನಗರದ ಬೋರ್‌ವೆಲ್‌ಗಳು ಕೆಲ ವರ್ಷಗಳಲ್ಲಿ ಬತ್ತಿ ಹೋಗಲಿವೆ,'' ಎಂದು ಟಿ.ವಿ ರಾಮಚಂದ್ರ ಎಚ್ಚರಿಕೆ ನೀಡಿದರು.

**ನಿಸರ್ಗದ ನಿಯಮಗಳಿಗೆ ವಿರುದ್ಧವಾಗಿ ನಡೆಯುತ್ತಿರುವ ರಾಜ ಕಾಲುವೆ ಕಾಮಗಾರಿಯಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಅನಾಹುತಗಳು ಸಂಭವಿಸಲಿವೆ. ಒತ್ತುವರಿ ತೆರವುಗೊಳಿಸಿ ನೈಸರ್ಗಿಕವಾಗಿ ನಿರ್ಮಾಣ ಮಾಡದಿದ್ದರೆ ನಗರದ ಪ್ರವಾಹ ಪರಿಸ್ಥಿತಿ ತಡೆಯಲು ಸಾಧ್ಯವೇ ಇಲ್ಲ.**

**- ಡಾ.ಟಿ.ವಿ ರಾಮಚಂದ್ರ, ಪ್ರಾಧ್ಯಾಪಕರು ಐಐಎಸ್ಸಿ**

**ಹಣ ಪೋಲು ತಡೆಯಬಹುದು**

**ಪ್ರತಿ ಕಿ.ಮೀಗೆ 8 ಕೋಟಿ ರೂ. ಖರ್ಚು ಮಾಡಿ ರಾಜಕಾಲುವೆ ನಿರ್ಮಾಣ ಮಾಡುವುದು ವ್ಯರ್ಥ. ಇದರಿಂದ ಸಾರ್ವಜನಿಕರ ಹಣ ಪೋಲಾಗುತ್ತದೆ. ಜತೆಗೆ ಪರಿಸರ ಅಸಮತೋಲನಕ್ಕೂ ಕಾರಣವಾಗುತ್ತದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು. ಆದರೆ, ಅದನ್ನು ಲೆಕ್ಕಿಸದೆ, ಬಿಬಿಎಂಪಿ ಅನುಮೋದನೆ ಪ್ರಕಾರ ಜಲಮಂಡಳಿ 800 ಕೋಟಿ ರೂ. ವೆಚ್ಚದ ಕಾಮಗಾರಿ ಕೈಗೆತ್ತಿಕೊಂಡಿದೆ. ಇದೀಗ ಹೆಚ್ಚುವರಿ 300 ಕೋಟಿ ರೂ. ಅನುದಾನಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಹಳೆ ಮಾದರಿಯಲ್ಲಿ ಕಾಮಗಾರಿ ಮುಂದುವರಿಯುವುದು ಖಚಿತವಾಗಿದೆ.**

VK ವಿಜಯ ಕರ್ನಾಟಕ
ಮಳೆಯ ಅನುಭವ ಹಂಚಿಕೊ...
ಅರ್ಧ ರಾತ್ರಿ ಸುರಿದ ಮಳೆಗೆ ರಾಜ್ಯದ ರಾಜಧಾನಿ...
ಮುಳುಗೆದ್ದಿದೆ. ಇದರಿಂದ ಚೇತರಿಸಿಕೊಳ್ಳುವ ಮೊ...
ಸುರಿಯುತ್ತಿದೆ. ನೀವು ಹೀಗೆ ಮುಳುಗಿದ ...
ನಿವಾಸಿಯಾಗಿದ್ದರೆ, ಮರೆಯಲಾಗದ ಆ ಕ್ಷಣಗ...
ಹಂಚಿಕೊಳ್ಳಿ, ಮಳೆಯ ಉಗ್ರಾವತಾರದ ಫೋ...
ತೆಗೆದಿದ್ದರೆ ನಮಗೆ ಕಳಿಸಿಕೊಡಿ...
ಮಾಹಿತಿ, ಫೋಟೋಗಳನ್ನು ವಾ...
78995245...

## ಸಾಂಕ್ರಾಮಿಕ ರೋ...

■ **ವಿಕ ಸುದ್ದಿಲೋಕ** ಬೆಂಗಳೂರು

ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಪ್ರವಾಹ ಉಂಟಾಗಿದೆ. ಸಾವಿರಾರು ಮನೆಗಳಿಗೆ ಮಳೆ ನೀರು ನುಗ್ಗಿದ್ದು, ಎಲ್ಲೆಂದರಲ್ಲಿ ನೀರು ನಿಂತಿದೆ. ಇದರಿಂದ ಡೆಂಗೆ, ವೈರಲ್ ಜ್ವರ ಸೇರಿದಂತೆ ಮಾರಕ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ.

ನಗರದಲ್ಲಿ ಈಗಾಗಲೇ ಡೆಂಗೆ, ಚಿಕೂನ್ ಗುನ್ಯಾ, ಮಲೇರಿಯಾ, ಎಚ್1ಎನ್1 ಸೇರಿದಂತೆ ವೈರಲ್ ರೋಗಗಳು ಜನರನ್ನು ಹೈರಾಣ ಮಾಡಿವೆ. ಹೀಗಿರುವಾಗ ನಿರಂತರವಾಗಿ ಸುರಿಯುತ್ತಿರುವ ಧಾರಾಕಾರ ಮಳೆಗೆ ನಗರದ ರಸ್ತೆಗಳೆಲ್ಲ ಗುಂಡಿ ಬಿದ್ದು ಜಲಾವೃತವಾಗಿವೆ. ಸಾಲದೆಂದು ತಗ್ಗು ಪ್ರದೇಶದಲ್ಲಿರುವ ಮನೆಗಳ...

ಕಡತಗಳು ನೀರು ಪಾಲು । ಶಾಲೆಗೆ ರಜೆ...

...ಕ್ರಾಮಿಕ
... ಸಾವಿನ
...ದಲ್ಲಿ ನಿಮ್ಮ
...ರಕ್ಷಿಸಿಕೊಳ್ಳಲು
...ಮಾಡಿಯೇ
...ಮ್ಮೊಂದಿಗೆ
...ರರಿಗೂ
... ಮಾಡಿ
ಒಪ್ಪಿಗೆ

Scanned by CamScanner